ಕರ್ನಾಟಕ ವಿಧಾನ ಸಭೆ ಗ್ರಂಥಾಲಯ ಮತ್ತು ಪರಾಮರ್ಶನ ಶಾಖೆ

KARNATAKA LEGISLATIVE ASSEMBLY LIBRARY AND REFERENCE HALL

ಪತ್ರಿಕಾ ತುಣುಕುಗಳು

PAPER CLIPPINGS

ಶಾಖೆ / ವಿಷಯ : DEPARTMENT / SUBJECT: ರಾಜಕೀಯ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ    ದಿನಾಂಕ : DATE : 16/11/2019

# ನನ್ನ ವಿರುದ್ಧದ ಪಿತೂರಿಗೆ ಸೋಲಾಗಿದೆ: ಸುಧಾಕರ್

## ಸಂವಿಧಾನವನ್ನು ಸುಪ್ರೀಂಕೋರ್ಟ್ ಬದುಕಿಸಿದೆ
## ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಇನ್ನು ಕೇಸರಿ ಕ್ರಾಂತಿ

**ಚಿಕ್ಕಬಳ್ಳಾಪುರ:** ನನ್ನ ರಾಜಕೀಯ ಭವಿಷ್ಯ ಮೊಟಕುಗೊಳಿಸಬೇಕು ಎಂಬ ಪಿತೂರಿಗೆ ಸೋಲಾಗಿದೆ. ದೇಶದ ಸಂವಿಧಾನವನ್ನು ಸುಪ್ರೀಂ ಕೋರ್ಟ್ ಬದುಕಿಸಿದೆ ಎಂದು ಅನರ್ಹ ಶಾಸಕ ಡಾ.ಕೆ.ಸುಧಾಕರ್ ಹೇಳಿದ್ದಾರೆ. ಉಪ ಚುನಾವಣೆ ಪೂರ್ವಭಾವಿ ಸಭೆಯಲ್ಲಿ ಶುಕ್ರವಾರ ಮಾತನಾಡಿದ ಅವರು, ಬಿಜೆಪಿಯಲ್ಲಿ ಮೂಲ, ವಲಸಿಗ ಎಂಬ ಪದಗಳೇ ಬೇಡ. ಎಲ್ಲರೂ ಬಿಜೆಪಿ ಕುಟುಂಬದ ಸದಸ್ಯರು. ನನ್ನ ಬೆಂಬಲಿಗರಿಗೆ ವಿಶೇಷ ಆದ್ಯತೆ ನೀಡುತ್ತೇನೆಂಬ ಅನುಮಾನ ಬೇಡ. ಎಲ್ಲರಿಗೂ ಸಮಾನ ಅವಕಾಶ ನೀಡಲು ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ ಎಂದು ಭರವಸೆ ನೀಡಿದರು.



**ನಾಡಿದ್ದು ನಾಮಪತ್ರ ಸಲ್ಲಿಕೆ:** ನ.18ರಂದು ಚಿಕ್ಕಬಳ್ಳಾಪುರ ಕ್ಷೇತ್ರದ ಬಿಜೆಪಿಯ ಅಧಿಕೃತ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸುವೆ. ನಗರದ ವಾಪಸಂದ್ರದಲ್ಲಿರುವ ರಂಗನಾಥಸ್ವಾಮಿ ದೇವಾಲಯದಲ್ಲಿ ಪೂಜೆ ಸಲ್ಲಿಸಿ, ಬಳಿಕ ನಗರದ ಪ್ರಮುಖ ರಸ್ತೆಯಲ್ಲಿ ಮೆರವಣಿಗೆಯಲ್ಲಿ ಸಾಗಿ ನಾಮಪತ್ರ ಸಲ್ಲಿಸಲಾಗುವುದು. ಈ ಸಂದರ್ಭದಲ್ಲಿ ಸೇರಲಿರುವ ಜನರ ಕೂಗು ರಾಜ್ಯಕ್ಕೆ ಮುಟ್ಟುವಂತಿರಬೇಕು ಎಂದರು.

**ಕೇಸರಿ ಕ್ರಾಂತಿ:** ಅವಿಭಜಿತ ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳನ್ನು ಕೇಸರಿಮಯ ಮಾಡುವುದೇ ಗುರಿಯಾಗಿದ್ದು, ಉಭಯ ಜಿಲ್ಲೆಗಳಲ್ಲಿ ಹಸಿರು ಕ್ರಾಂತಿಯ ಜೊತೆಗೆ ಕೇಸರಿ ಕ್ರಾಂತಿ ಮಾಡಲು ಸನ್ನದ್ಧರಾಗುವಂತೆ ಕಾರ್ಯಕರ್ತರಿಗೆ ಕರೆ ನೀಡಿದರು. ಬಿಜೆಪಿಗೆ ಇನ್ಮುಂದೆ ಶುಕ್ರದೆಸೆ ಆರಂಭವಾಗಲಿದೆ ಎಂದು ತಿಳಿಸಿದರು.